# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.30, ಹೇರೋಹಳ್ಳಿ, ಬೆಂಗಳೂರು-560091.

---

ಸಂಖ್ಯೆ: .ಸ.ಅ: ಹೇ.ವಾ.ಕ: ಪಿಆರ್/04/2022-23 ದಿನಾಂಕ : 06-10-2022

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.30ರಲ್ಲಿ ದಿನಾಂಕ: 01.10.2022 ರಲ್ಲಿ ನಡೆದ ವಾರ್ಡ್ ಕಮಿಟಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜಾರಾಗಿದ್ದವರ ವಿವರಗಳ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 01 | ಶ್ರೀ ಶ್ರೀನಿವಾಸಯ್ಯ | ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು. |
| 02 | ಶ್ರೀ ನಟರಾಜ್.ಎನ್ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ.72 ಹೇರೋಹಳ್ಳಿ. |
| 03 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 03 | ಶ್ರೀ ಹನುಮೇಶ | ಕಿರಿಯ ಆರೋಗ್ಯ ಪರಿವೀಕ್ಷಕರು |
| 04 | ಶ್ರೀ ಪ್ರತೀಪ್.ಎಲ್ | ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ (ಹೇರೋಹಳ್ಳಿ ಪಿ.ಹೆಚ್.ಸಿ) |
| 05 | ಶ್ರೀ ಎಸ್.ಶ್ರೀಕಾಂತ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ (ಡಬ್ಲ್ಯೂ.ಐ) |
| 06 | ಶ್ರೀ ಜೋಸೆಫ್ | ತೋಟಗಾರಿಕೆ |
| 07 | ಶ್ರೀ ಮುತ್ತಪ್ಪ.ಬಿ.ಕೆ | ಸ್ಥಳೀಯ ನಾಗರೀಕರು |
| 08 | ಶ್ರೀ ಸಿ.ಟಿ.ನರಸೇಗೌಡ | ಸ್ಥಳೀಯ ನಾಗರೀಕರು |

ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ, ಶ್ರೀನಿವಾಸಯ್ಯ ರವರ ಉಪಸ್ಥಿತಿಯಲ್ಲಿ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎನ್.ನಟರಾಜ್ ರವರು ಸಭೆಗೆ ಹಾಜರಿದ್ದು ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

**1.ಆರೋಗ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

ಶ್ರೀ ಪ್ರತೀಪ್ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು ಸಭೆಯಲ್ಲಿ ಮಾತನಾಡುತ್ತಾ, ವಾರ್ಡ್ ನಂ.30ರ ಪ್ರದೇಶದಲ್ಲಿ ಮೇ ತಿಂಗಳಿನಿಂದ ಇಲ್ಲಿಯವರೆಗೆ ಒಟ್ಟು 7539 ಕೊರೋನ ಕೋವಿಡ್-19 ಪ್ರಕರಣದ ಪರೀಕ್ಷೆ ಮಾಡಲಾಗಿರುತ್ತದೆ. ಮೇ ತಿಂಗಳಿನಿಂದ ಇಲ್ಲಿಯವರೆಗೂ ಕೋವಿಡ್-19 ಪಾಸಿಟೀವ್ ಪ್ರಕರಣವು ಒಟ್ಟು 113 ಇದ್ದು, ಕೋವಿಡ್-19 ಸಕ್ರೀಯವಾಗಿ 5 ಪ್ರಕರಣವು ಮನೆಯಲ್ಲಿ ಸ್ವ-ಚಿಕಿತ್ಸೆ ಪಡೆಯುತ್ತಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಮಳೆಗಾಲದ ಪ್ರಯುಕ್ತ ವೈರಲ್ ಫೀವರ್ ಸಾರ್ವಜನಿಕರಲ್ಲಿ ಹೆಚ್ಚಾಗುತ್ತಿದೆ. ಬೀದಿಬದಿಯ ಆಹಾರ ತಿನ್ನುವುದರಿಂದ ಫೀವರ್ ಹೆಚ್ಚಾಗುತ್ತಿದೆ ಎಂದು ಶ್ರೀ ಪ್ರತೀಪ್‌ರವರು ಸಭೆಯಲ್ಲಿ ತಿಳಿಸಿದರು. ಎಲ್ಲಾ ಶಾಲೆಯ ಮಕ್ಕಳಿಗೆ ಲಸಿಕೆಯನ್ನು ಹಾಕಲಾಗಿದೆ ಎಂದು ತಿಳಿಸಿದರು. ಎಂದಿನಂತೆ ಭೂಸ್ಟರ್‌ಡೋಸ್ ಲಸಿಕೆಯನ್ನು ಎಲ್ಲಾ ಸಾರ್ವಜನಿಕರಿಗೂ ಹಾಕಲಾಗುತ್ತದೆ.

ವಿಶ್ವ ಪಶು ದಿನಾಚರಣೆಯನ್ನು ನಡೆಸಲಾಯಿತು. ಮನೆಯಲ್ಲಿ ಹಾಗೂ ಬೀದಿಯಲ್ಲಿ ಸಾಕಿರುವ ನಾಯಿಗಳಿಗೆ ಲಸಿಕೆಯನ್ನು ಹಾಕಿಸಬೇಕು.

**2. ಘನತ್ಯಾಜ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

ವಾರ್ಡ್ ನಂ.30ರ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುತ್ತಿವೆ. ಅದನ್ನು ಸ್ವಚ್ಛಗೊಳಿಸಲು ಸಭೆಯಲ್ಲಿ ತಿಳಿಸಿದರು. ಮಳೆ ಬಂದಿರುವ ಕಾರಣ ಕಸದ ರಾಶಿಯು ಹೆಚ್ಚಾಗುತ್ತಿದೆ. ಅದನ್ನು ತೆರವುಗೊಳಿಸಲು ಸಂಬಂಧ ಪಟ್ಟ ಅಧಿಕಾರಿಯವರಿಗೆ ತಿಳಿಸಿದರು. ಪ್ರತಿದಿನ ರಸ್ತೆಯಲ್ಲಿ ಕಸವನ್ನು ಗುಡಿಸುವವರು ರಸ್ತೆಯ ಬದಿಯಲ್ಲಿ ಕಸವನ್ನು

ಗುಡಿಸಬೇಕು. ಗುಡಿಸಿದ ಕಸವನ್ನು ಕಸದ ಗಾಡಿಗೆ ಹಾಕಬೇಕು ಎಂದು ಸಭೆಯಲ್ಲಿ ತಿಳಿಸಿದರು. ಅರುಣೋದಯ ಸ್ಕೂಲ್ ರಸ್ತೆಯಲ್ಲಿ ಬ್ಲಾಕ್‌ಸ್ಪಾಟ್ ಇದೆ. ಅದರಿಂದ ಶಾಲೆಯ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

3. ತೋಟಗಾರಿಕೆ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು:-

ವಾರ್ಡ್ ನಂ.30ರ ವ್ಯಾಪ್ತಿಯಲ್ಲಿರುವ ಉದ್ಯಾನವನವನ್ನು ಸ್ವಚ್ಛಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು. ಉದ್ಯಾನವನದಲ್ಲಿರುವ ಜಿಮ್ ಉಪಕರಣಗಳಿಗೆ ಗ್ರೀಸ್ ಹಾಕುವುದು ಮತ್ತು ಶೌಚಾಲಯವನ್ನು ಸ್ವಚ್ಛಗೊಳಿಸುವುದು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸಂಬಂಧಿಸಿರುತ್ತದೆ. ತೋಟಗಾರಿಕೆಯ ಇಲಾಖೆಯ ಅಧಿಕಾರಿಯವರು ಅಂದಾಜು ಪಟ್ಟಿ ಮತ್ತು 15 ಜನರ ಲೀಸ್ಟ್‌ನ್ನು ತರಬೇಕು ಎಂದು ಸಭೆಯಲ್ಲಿ ತಿಳಿಸಿದರು.

4. ಪಶುಸಂಗೋಪನಾ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-

ವಾರ್ಡ್ ವ್ಯಾಪ್ತಿಯಲ್ಲಿ ನಾಯಿಗಳು ತುಂಬಾ ಹೆಚ್ಚಾಗಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲ ಇಲಾಖಾ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಸಭೆಗೆ ಕಡ್ಡಾಯವಾಗಿ ಹಾಜಾರಾಗಬೇಕೆಂದು ತಿಳಿಸುತ್ತಾ, ಹಾಜರಿಲ್ಲದ ಅಧಿಕಾರಿಗಳ ವಿರುದ್ಧ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ವಂದಾನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 30. ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಾರ್ಡ್ ಕಮಿಟಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ 30 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

ಅಧಿಕಾರಿಗಳ ಮಾಹಿತಿಗಾಗಿ

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4.ಮಾನ್ಯ ಉಪ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5.ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಸಲ್ಲಿಸಿದೆ.
6.ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
7.ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8.ಆರೋಗ್ಯ ವೈದ್ಯಾಧಿಕಾರಿಗಳು ಯಶವಂತಪುರ ರವರ ಮಾಹಿತಿಗಾಗಿ ಸಲ್ಲಿಸಿದೆ.
9.ಸಹಾಯಕ ನಿರ್ದೇಶಕರು, (ಪಶು ಸಂಗೋಪನೆ) ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
10.ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
11.ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
12.ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
13.ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
14.ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.72, ಹೇರೋಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15.ಪೋಲೀಸ್ ಇನ್‌ಸ್ಪೆಕ್ಟರ್, ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
16.ಅಧೀಕ್ಷಕರು (ಪಾರ್ಕ್‌ಗಳ ನಿರ್ವಹಣೆ) ತೋಟಗಾರಿಕೆ ಇಲಾಖೆ ರವರ ಮಾಹಿತಿಗಾಗಿ ಕಳುಹಿಸಿದೆ.